ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು :

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ II)

ಶ್ರೀಮತಿ ಪ್ರಮೀಳಾ ನೇಸರ್ಗಿ : ಈ ಪಬ್ಲಿಕ್ ಪ್ರಿಮಿಸಸ್ ಆಕ್ಟ್‌ನ ವ್ಯಾಲಿಡಿಟಿ ಬಗ್ಗೆ ಲಾರ್ಜರ್ ಬೆಂಚ್‌ಗೆ ಸುಪ್ರೀಂ ಕೋರ್ಟಿನಲ್ಲಿ ರೆಫರ್ ಆಗಿದೆ. ನೆಕ್ಸ್ಟ್ ಹಿಯರಿಂಗ್ ಫಿಕ್ಸ್ ಮಾಡಿದ್ದಾರೆ.

MR. SPEAKER : If the Hon. Court finds ultimately that the law that is enacted by this House is not in good taste, and not in confirmity with the provisions of the Constitution, they can strike down. Otherwise, they will be compelled to uphold the validity. Let us do our business. Why should we anticipate something from the court and refrain from doing our duties. This House is soverign body. Let us exercise our right.

7.20 ಪಿ.ಎಂ

(ತಿದ್ದುಪಡಿ) ವಿಧೇಯಕ, 1999

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಆವರಣಗಳಲ್ಲಿ ಅನ್-ಆಥರೈಜೆಡ್ ಆಕ್ಯುಪೇಷನ್ ಆಗಿದ್ದರೆ ನಾವು ಡೆಲೀಟ್ ಮಾಡತಕ್ಕಂಥ ಅವಕಾಶ ಇತ್ತು. ಈಗ ಸಬ್ಸಿಡಿಯರೀಸ್ ಆಫ್ ಪಬ್ಲಿಕ್ ಅಂಡರ್-ಟೇಕಿಂಗ್ಸ್ ಇದೆ. ಇದಕ್ಕೆ ಮೊದಲು ಅವಕಾಶ ಇರಲಿಲ್ಲ. ಆದ್ದರಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಈ ಸಬ್ಸಿಡಿಯರೀಸ್ ಬಗ್ಗೆ ಬಹಳ ಸ್ಪಷ್ಟವಾಗಿ ಡಿಫೈನ್ ಮಾಡದೇ ಹೋದರೆ ನಾಳೆದಿವಸ ಕಷ್ಟವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಹೆಚ್.ಎಂ.ಟಿ ಫ್ಯಾಕ್ಟರಿಯಲ್ಲಿ ಆನ್ಸಿಲರಿ ಯೂನಿಟ್ ಒಂದನ್ನು ಹಾಕಿಕೊಂಡು, ಸಬ್ಸಿಡಿಯರಿ ಯೂನಿಟ್ ಎಂದು ಕ್ಲೈಂ ಮಾಡಿಕೊಳ್ಳಬಹುದು.

MR. SPEAKER : An ancillary unit is not a subsidiary unit. Why should we try to interpret law, as we like? Let us interpret in the right way.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1999ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : ಪ್ರಸ್ತಾವ ಏನೆಂದರೆ; "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, "1999ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ)

ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1999ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅದಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅದಿಭೋಗದಾರರನ್ನು ಹೊರಹಾಕುವ) (ಎರಡನೇ ತಿದ್ದುಪಡಿ) ವಿಧೇಯಕ, ೧೯೯೯.

ಪರ್ಯಾಲೋಚನಾ ಪ್ರಸ್ತಾವ

+ಶ್ರೀ ಬಿ. ಸೋಮಶೇಖರ್ (ಮಾನ್ಯ ಕಂದಾಯ ಮಂತ್ರಿ) : ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ, 1999ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅದಿಭೋಗದಾರರನ್ನು ಹೊರಹಾಕುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ವಕ್ಫ್ ಇನ್‌ಸ್ಟಿಟ್ಯೂಷನ್‌ನಲ್ಲಿ ಎರಡು ರೀತಿಯಾಗಿವೆ. ಮೊದಲನೆಯದು ಏನೆಂದರೆ, ವಕ್ಫ್ ಬೋರ್ಡ್ ವ್ಯಾಪ್ತಿಗೆ ಬರತಕ್ಕಂಥ ಇನ್‌ಸ್ಟಿಟ್ಯೂಷನ್‌ಗಳು, ಎರಡನೆಯದು ವಕ್ಫ್ ಬೋರ್ಡ್ ಹೊರಗಡೆ ಇರತಕ್ಕಂಥ ಕೆಲವು ರಿಜಿಸ್ಟರ್ಡ್ ಇನ್‌ಸ್ಟಿಟ್ಯೂಷನ್‌ಗಳು. ಬೋರ್ಡ್ ಒಳಗಡೆ ಇರತಕ್ಕಂಥ ಇನ್‌ಸ್ಟಿಟ್ಯೂಷನ್‌ಗಳನ್ನು ಅನಧಿಕೃತವಾಗಿ ಯಾರಾದರೂ ಒಕ್ಕಲೆಬ್ಬಿಸುವಂಥ ಅವಕಾಶ ಇದೆ. ಹಾಗೆಯೇ ವಕ್ಫ್ ಬೋರ್ಡ್ ಹೊರಗಡೆ ಇರತಕ್ಕಂಥ ಇನ್‌ಸ್ಟಿಟ್ಯೂಷನ್‌ಗಳನ್ನು ಅನಧಿಕೃತವಾಗಿ ಕೆಲವರು ಕಬಳಿಸಿಕೊಳ್ಳುತ್ತಿದ್ದಾರೆಂದು ದೂರುಗಳು ಬಂದ ಮೇಲೆ ಅದನ್ನೂ ನಾವು ಒಕ್ಕಲೆಬ್ಬಿಸುವ ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದೇವೆ outside the wakf board property i.e., directy under the management of wakf board property.

ಶ್ರೀ ಬಿ.ಎ. ಮೊಯಿದ್ದೀನ್ (ಉನ್ನತ ಶಿಕ್ಷಣ ಸಚಿವರು) : ಈ ಬೋರ್ಡ್‌ನಲ್ಲಿ ನಾನು ಮೆಂಬರ್ ಆಗಿದ್ದೇನೆ. ಇದರಲ್ಲಿ ಎರಡು ರೀತಿ ಇದೆ. ಮೊದಲನೆಯದು ಏನೆಂದರೆ, direct administration by Wakf. ಉದಾಹರಣೆಗೆ ಹೇಳುವುದಾದರೆ, ಮಂಡ್ಯದಲ್ಲಿ ಒಂದು ವಕ್ಫ್ ಬೋರ್ಡ್ ಇದೆ. ಇಲ್ಲಿ ಮ್ಯಾನೇಜ್‌ಮೆಂಟ್ ಸರಿಯಾಗಿ ಮಾಡುತ್ತಿಲ್ಲ ಮತ್ತು ಹಣದ ದುರುಪಯೋಗ ನಡೆದಿದೆ. That wakf will come under the direct management of the Wakf.